



# ಬದುಕಿ ಬಾಳಬೇಕಾಗಿದೆ ನಾವು – ನೀವು

ಜಿ.ಎಸ್. ಜಯದೇವ

ನಮ್ಮ ದೇಶದ ಹಾಗೂ ಇಡೀ ವಿಶ್ವದ ಜೀವನಶೈಲಿ ಕ್ಷಿಪ್ರಗತಿಯಿಂದ ಬದಲಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಈ ಆಧುನಿಕ ಚಲನೆಯ ಭರದಲ್ಲಿ ನಾವು ಉಳಿಸಿಕೊಳ್ಳಬೇಕಾದ ಹಾಗೂ ಕಂಡುಕೊಳ್ಳಬೇಕಾದ ಮೌಲ್ಯಗಳು ಯಾವುವು ಎಂಬುದನ್ನು ಚರ್ಚಿಸುವ ಲೇಖಕರು ಉತ್ತಮ ಚಿಂತಕರೂ, ವಾಗ್ಮಿಗಳೂ, ನುರಿತ ಬರಹಗಾರರೂ ಆಗಿದ್ದಾರೆ. ಚಾಮರಾಜನಗರದಲ್ಲಿ 'ದೀನಬಂಧು ಟ್ರಸ್ಟ್' ಎಂಬ ಅನಾಥಾಲಯವೊಂದನ್ನು ಕಟ್ಟಿ ಬೆಳೆಸುವ ಮೂಲಕ ಅವರು ಸಮಾಜಸೇವೆಯಲ್ಲೇ ತಮ್ಮನ್ನು ತಾವು ಪೂರ್ಣಾವಧಿ ತೊಡಗಿಸಿಕೊಂಡಿದ್ದಾರೆ.

ಹೆಚ್ಚುತ್ತಿರುವ ಪ್ರಕೃತಿ ವಿಕೋಪಗಳು, ಮಿತಿಮೀರಿ ಬೆಳೆಯುತ್ತಿರುವ ಜನಸಂಖ್ಯೆ, ಹಳಸುತ್ತಿರುವ ಅಂತಾರಾಷ್ಟ್ರೀಯ ಸಂಬಂಧಗಳು – ಇಂತಹ ಅನೇಕ ಅವಘಡಗಳನ್ನೇ ಬಂಡವಾಳ ಮಾಡಿಕೊಂಡು ಬೆಳೆಯುತ್ತಿರುವ ಮಾರುಕಟ್ಟೆಗಳು ಇಂದು ಮನುಕುಲವನ್ನು ವಿನಾಶದ ಅಂಚಿಗೆ ಕೊಂಡೊಯ್ದಿದೆ. ಮೇಲ್ನೋಟಕ್ಕೆ ಇವು ಸರಿಪಡಿಸಲಾರದಷ್ಟು ಕೈಮೀರಿ ಹೋಗಿರುವಂತೆ ಕಂಡುಬರುತ್ತಿವೆ. ಮನುಷ್ಯನ ಸ್ವಾರ್ಥ ದುರಾಸೆಗಳಿಂದಾಗಿ ಮುಂದೊಂದು ದಿನ ಆಗಬಹುದಾದ ಜಾಗತಿಕ ಯುದ್ಧ ಇಡೀ ಭೂಮಿಯನ್ನೇ ಸರ್ವನಾಶ ಮಾಡಬಹುದು. ಪರಿಸ್ಥಿತಿ ಇಷ್ಟೊಂದು ದುರಂತಮಯವಾಗಿದ್ದರೂ ನಮ್ಮ ಯುವ ಜನತೆ ಏಕೆ ಎಚ್ಚೆತ್ತುಕೊಂಡಿಲ್ಲ? ತಮ್ಮ ಮೊಬೈಲ್ – ಲ್ಯಾಪ್‌ಟಾಪ್‌ಗಳಲ್ಲಿ, ಮನೋರಂಜನೆಗಳಲ್ಲಿ ಮುಳುಗಿ ಹೋಗಿದ್ದಾರಲ್ಲ!

ಯುವಕರಷ್ಟೇ ಏಕೆ, ನಮ್ಮ ಸಮಾಜದ ಶೇಕಡ ೯೦ ರಷ್ಟು ಜನ ತಮ್ಮ ಸುತ್ತಮುತ್ತ ಆಗುತ್ತಿರುವ ಪಲ್ಲಟಗಳಿಗೂ ತಮಗೂ ಏನೇನೂ ಸಂಬಂಧವಿಲ್ಲವೇನೋ ಎಂಬಂತೆ ನಡೆದುಕೊಳ್ಳುತ್ತಿದ್ದಾರೆ. ಹೆಚ್ಚೆಂದರೆ ತಮ್ಮ ಮತ್ತು ತಮ್ಮ ಕುಟುಂಬದ ಕ್ಷೇಮಕ್ಕಾಗಿ ಮಾತ್ರ ಹೆಣಗಾಡುತ್ತಾರೆ. ಮನುಷ್ಯಕುಲ ಎದುರಿಸುತ್ತಿರುವ ಈ ಜಾಗತಿಕ ಸಮಸ್ಯೆಗಳಿಗೂ ನಮ್ಮ ವೈಯುಕ್ತಿಕ ಜೀವನಕ್ಕೂ ಸಂಬಂಧವೇ ಇಲ್ಲವೇನು?

ಇದೊಂದು ಗಂಭೀರವಾದ ಪ್ರಶ್ನೆ. ನೀವು ಸಂದರ್ಶನ ನಡೆಸಿದರೆ ಶೇಕಡ ೯೯ ಭಾಗ ಜನ ಇದಾವುದಕ್ಕೂ ತಾವು ಕಾರಣರಲ್ಲ ಎಂದು ಕೈ ತೊಳೆದುಕೊಂಡು ಬಿಡುತ್ತಾರೆ. ಅವರು ತಿರುಗಿ ಕೇಳಬಹುದಾದ ಪ್ರಶ್ನೆ ಎಂದರೆ – ದೊಡ್ಡ ದೊಡ್ಡ ಕಾರ್ಖಾನೆಗಳು ಸಮುದ್ರದ ನೀರನ್ನು ಕಲುಷಿತಗೊಳಿಸಿದರೆ ಅದಕ್ಕೆ ನಾನು ಹೇಗೆ ಹೊಣೆ? ಕಾಡುಗಳು ನಾಶವಾಗುತ್ತಿವೆ ನಿಜ, ಆದರೆ ನಾನು ಕಾರಣನಲ್ಲ. ಅಹಿಂಸೆಯ ಮಹತ್ವವನ್ನು ಜಗತ್ತಿಗೇ ಮನವರಿಕೆ ಮಾಡಿಕೊಟ್ಟ ಗಾಂಧೀ ಮಹಾತ್ಮನ ಈ ನಾಡಿನಲ್ಲಿ ನಾವು ಅನೇಕಾನೇಕ ಅಣುಬಾಂಬುಗಳನ್ನು ಸಿದ್ಧಪಡಿಸಿ ಇಟ್ಟುಕೊಂಡಿದ್ದೇವೆ ನಿಜ. ಆದರೆ ನಮ್ಮ ದೇಶವನ್ನು ರಕ್ಷಿಸಲು ಇವೆಲ್ಲಾ ಬೇಕಾಗುತ್ತದಲ್ಲವೆ? ಭಾರತ – ಪಾಕಿಸ್ತಾನಕ್ಕೆ ಯುದ್ಧವಾದರೆ ಆಗಲಿ ಬಿಡಿ; ಹೇಗೂ ನಮ್ಮ ಶಸ್ತ್ರಪಡೆ ದೊಡ್ಡದಾಗಿದೆ! ಯುದ್ಧಕ್ಕಿಂತ ಸ್ನೇಹ ಮುಖ್ಯ ಎಂದು ಯಾರಿಗೂ ಅನ್ನಿಸುವುದಿಲ್ಲ. ತಮ್ಮ ಸುತ್ತಮುತ್ತ ಸಂಭವಿಸುತ್ತಿರುವ ಇಂತಹ ಅನೇಕ ದುರಂತಮಯ ಬೆಳವಣಿಗೆಗಳ ಪರಿಣಾಮಗಳನ್ನು ಸ್ವಲ್ಪವೂ ಗಣನೆಗೆ ತೆಗೆದುಕೊಳ್ಳದೆ, ತಮಗೂ ಇದಕ್ಕೂ ಏನೇನು ಸಂಬಂಧವಿಲ್ಲವೆಂಬಂತೆ ವಾದ ಮಂಡಿಸುತ್ತಾರೆ.

ಆಳವಾಗಿ ವಿಚಾರ ಮಾಡಿದರೆ ನಮ್ಮ ವೈಯಕ್ತಿಕ ಜೀವನಶೈಲಿಗೂ, ಪರಿಸರಕ್ಕೂ ಇರುವ ಸಂಬಂಧಗಳ ಸರಪಣಿ ನಮಗೂ ಮುಂದೊಂದು ದಿನ ಜರುಗಬಹುದಾದ ಜಾಗತಿಕ ಯುದ್ಧ ವಿನಾಶಗಳಿಗೂ ನೇರವಾದ ಸಂಬಂಧವನ್ನು ಕಲ್ಪಿಸುತ್ತದೆ. ಒಬ್ಬ ವ್ಯಕ್ತಿ ಅಥವಾ ಬೆರಳೆಣಿಕೆಯ ವ್ಯಕ್ತಿಗಳು ಸೇರಿಕೊಂಡು ಇಂತಹ ಒಂದು ಬೃಹತ್ ಸಮಸ್ಯೆಯನ್ನು ಸೃಷ್ಟಿಸಲಾರರು. ಬೃಹದಾಕಾರವಾಗಿ ಬೆಳೆಯುತ್ತಿರುವ ಈ ಸಮಸ್ಯೆಗೆ ನಮ್ಮೆಲ್ಲರ ಸ್ವಾರ್ಥ ಬದುಕಿನ ಕೊಡುಗೆ ಇದೆ ಎಂಬುದನ್ನು ಮೊದಲು ನಾವು ಗುರುತಿಸಬೇಕು. ಮಠ, ಮಸೀದಿ, ಚರ್ಚುಗಳ ವಕ್ತಾರರು, ರಾಜಕೀಯ ಧುರೀಣರು, ಮಾರುಕಟ್ಟೆಯ ನಿರ್ಮಾತೃಗಳು, ಬೃಹತ್ ಉತ್ಪಾದಕರು, ಎಲ್ಲಕ್ಕಿಂತ ಮಿಗಿಲಾಗಿ ಇವರೆಲ್ಲರಿಗೂ ಒತ್ತಾಸೆಯಾಗಿ ನಿಂತಿರುವ ಶ್ರೀಸಾಮಾನ್ಯನ ಕೊಳ್ಳುಬಾಕತನ ಮತ್ತು ಸ್ವಾರ್ಥದ ಪರಿಣಾಮವಾಗಿ ಇಂದು ಜಗತ್ತು ದುರಂತದ ಅಂಚಿಗೆ ಬಂದು ನಿಂತಿದೆ. ಈ ಸಂದರ್ಭದಲ್ಲಿ ನಾವೆಲ್ಲರೂ ನಮ್ಮ ಜೀವನಶೈಲಿಯ ಕಡೆ ನೋಡಬೇಕು; ನಮ್ಮ ಐಷಾರಾಮಿ ಕನಸುಗಳ ಪರಿಣಾಮವನ್ನು ಅರಿಯಬೇಕು. ನಾವು ಯುವಕರಿಗೆ ಕಟ್ಟಿಕೊಡುತ್ತಿರುವ ವೈಭವೋಪೇತ ಕನಸಿನ ಜೀವನದ ಪರಿಣಾಮ

ಗಳನ್ನು ಗುರುತಿಸಬೇಕು. ಅದ್ದೂರಿ ಕಾರ್ಯಕ್ರಮಗಳ ನಡುವೆ ನಾವು ಪೋಲು ಮಾಡುತ್ತಿರುವ ಸಂಪನ್ಮೂಲಗಳು, ವಾಹನಗಳ ಅತಿಬಳಕೆ, ಅನಗತ್ಯ ವಸ್ತುಗಳ ಬೃಹತ್ ಉತ್ಪಾದನೆ ಹೀಗೆ ಮನುಷ್ಯನ ಅಸಹಜ ಜೀವನ ಶೈಲಿಯಿಂದಾಗಿ ನೆಲ-ಜಲ-ಗಾಳಿ ಕಲುಷಿತವಾಗುತ್ತಿದೆ. ನಾವು ಬಳಸುವ ಕೊಳ್ಳುವ ಒಂದೊಂದು ವಸ್ತುವೂ ಈ ಸಮಸ್ಯೆಯ ಗುಡಾಣವನ್ನು ನಮ್ಮ ಪಾಲಿನ ಕೊಡುಗೆಯಿಂದ ತುಂಬಿಸುತ್ತಾ ಇದೆ. ಸರಳ ಜೀವನವನ್ನು ನಾವು ವ್ರತದೋಪಾದಿಯಲ್ಲಿ ಕೈಗೊಂಡರೆ ಸ್ವಲ್ಪಮಟ್ಟಿಗೆ ಈ ದುರಂತದಿಂದ ಪಾರಾಗಬಹುದು.

''ಎಲ್ಲರ ಅಗತ್ಯವನ್ನು ಪೂರೈಸಬಲ್ಲಷ್ಟು ಸಂಪತ್ತು ಈ ಭೂಮಿಯಲ್ಲಿದೆ, ಆದರೆ ಎಲ್ಲರ ದುರಾಸೆಯನ್ನಲ್ಲ'' ಎಂದು ಗಾಂಧೀಜಿ ಹೇಳಿದ್ದನ್ನು ನಾವು ಸ್ಮರಿಸಬಹುದು. ಅಪಾರವಾಗಿ ಬೆಳೆಯುತ್ತಿರುವ ಜನಸಂಖ್ಯೆ ಮತ್ತು ಈ ಜನಗಳ ಕೊಳ್ಳುವ ಶಕ್ತಿಯನ್ನು ಬಂಡವಾಳ ಮಾಡಿಕೊಂಡು ಬೆಳೆಯುತ್ತಿರುವ ಕಂಪನಿಗಳು ಸಮಸ್ಯೆಯನ್ನು ದಿನೇ ದಿನೇ ಉಲ್ಬಣಗೊಳಿಸುತ್ತಿವೆ. ಮೌಲ್ಯಗಳಿಗೆ ಅಥವಾ ಆಧ್ಯಾತ್ಮಿಕತೆಗೆ ಸ್ಥಾನವೇ ಇಲ್ಲದ ಇಂದಿನ ಮಾರುಕಟ್ಟೆ ಜೀವನ ಪದ್ಧತಿ ಪರಿಸರದ ಮಾಲಿನ್ಯದ ಜೊತೆ ಮನಸ್ಸಿನ ಮಾಲಿನ್ಯಕ್ಕೂ ಕಾರಣವಾಗಿದೆ. ಮನುಷ್ಯ ಮನುಷ್ಯರ ನಡುವೆ ಸ್ಪರ್ಧೆಯನ್ನು ಮಾತ್ರ ಹೆಚ್ಚಿಸುವ ಈ ಜೀವನ ಶೈಲಿಯಿಂದಾಗಿ ಮನದಾಳದಲ್ಲಿ ಮಲಗಿದ್ದ ಕ್ರೌರ್ಯ ಭುಗಿಲೇಳುತ್ತದೆ. ವ್ಯಕ್ತಿ-ವ್ಯಕ್ತಿಯ ನಡುವೆ ಹಿಂಸೆ ನೋವು ಅಭದ್ರತೆಗಳು ತಾಂಡವವಾಡುತ್ತವೆ. ಮನುಷ್ಯ ಸಂಬಂಧಗಳಲ್ಲಿ ಪ್ರೀತಿ-ಸಹನೆ-ಕರುಣೆಗಳು ಕಣ್ಮರೆಯಾಗಿ ಅಸಹನೆ, ಅಸಹಿಷ್ಣುತೆಗಳು ಮೇಲೇಳುತ್ತವೆ. ನಮ್ಮವರು-ತಮ್ಮವರು ಎಂಬ ಭೇದ ಕೇವಲ ವಸ್ತು ಲಾಭದ ಸ್ವಾರ್ಥದಿಂದ ಹುಟ್ಟಿ ಜನಾಂಗೀಯ ವೈಷಮ್ಯ - ಜಾತಿ ಕಲಹಗಳಾಗಿ ಹಿಂಸಾರೂಪ ತಾಳುತ್ತವೆ, ಅಸಮಾನತೆ ತಲೆ ಎತ್ತುತ್ತದೆ. ಇವು ಅಂತರ ರಾಜ್ಯ ಕಲಹಗಳಾಗುತ್ತವೆ; ಕೊನೆಗೆ ದೇಶ ದೇಶಗಳ ನಡುವಿನ ಯುದ್ಧವಾಗಿ ಪರಿಣಮಿಸುತ್ತದೆ. ಯಾವ ದೇಶಗಳು ಅತಿಯಾದ ಜನಸಂಖ್ಯೆಯಿಂದ, ದುರಾಡಳಿತದಿಂದ ಸಮಾನತೆ ಸಾಧ್ಯವಾಗದೆ ತೊಳಲುತ್ತಿವೆಯೋ ಆ ದೇಶಗಳು ತಮ್ಮ ಸಮಸ್ಯೆಗೆ ಪರಿಹಾರವನ್ನು ತಮ್ಮದೇ ನೆಲದಲ್ಲಿ ಕಂಡುಹಿಡಿಯುವ ಬದಲು ಇತರ ದೇಶಗಳ ಮೇಲೆ ಯುದ್ಧ ಸಾರುವ ಮೂಲಕ ಪರಿಹರಿಸಿಕೊಳ್ಳಲು ಪ್ರಯತ್ನಿಸುತ್ತವೆ. ಸರ್ಕಾರವಾಗಲಿ ನಾಯಕರಾಗಲಿ ಈ ಸಮಸ್ಯೆಯನ್ನು ಪರಿಹರಿಸಲಾಗುವುದಿಲ್ಲ. ಏಕೆಂದರೆ ಸರ್ಕಾರಗಳು ಜನಗಳ ಬೇಡಿಕೆಗೆ ತಕ್ಕ ಹಾಗೆ ವ್ಯವಸ್ಥೆಮಾಡಿ ಜನ ಮನ್ನಣೆ ಗಳಿಸಿ ಮುಂದಿನ ಚುನಾವಣೆಯಲ್ಲಿ ಆರಿಸಿಬರುವ ತಂತ್ರವನ್ನು ಅನುಸರಿಸದೆ ವಿಧಿಯಿಲ್ಲ. ಆದರೆ ಯಾವ ಸರ್ಕಾರವೂ ಜನಗಳಿಗೆ ಅಪ್ರಿಯವಾದ ಸತ್ಯವನ್ನು ಹೇಳುವುದಿಲ್ಲ. ಅಪ್ರಿಯವಾದ ಸತ್ಯ ಏನೆಂದರೆ ನಮ್ಮ ಭೂಮಿ ಜನಗಳ ದುರಾಸೆಯನ್ನು ಪೂರೈಸುವಂತಹ ಅಭಿವೃದ್ಧಿಯನ್ನು ತಾಳಿಕೊಳ್ಳಲಾರದು. ನಮ್ಮ ಇಂದಿನ ಪರಿಸ್ಥಿತಿಯಲ್ಲಿ ಈ ಅಪ್ರಿಯ ಸತ್ಯವನ್ನು ಯಾವ ಸರ್ಕಾರವೂ ಹೇಳಲು ಸಿದ್ಧವಿಲ್ಲ. ಬದಲಾಗಿ ಮತ್ತಷ್ಟು ಆಶ್ವಾಸನೆಗಳನ್ನು ಕೊಡುತ್ತಲೇ ದಿನ ತಳ್ಳುತ್ತಾರೆ.

**ಆದ್ದರಿಂದ ಈ ಸಮಸ್ಯೆಯನ್ನು ಯಾರು ಸೃಷ್ಟಿಸಿದರೋ ಅವರೇ ಪರಿಹರಿಸಬೇಕು. ಎಂದರೆ ನಾವು ನೀವು ಮಾತ್ರ ಪರಿಹರಿಸಲು ಸಾಧ್ಯ.**

ಇಂದು ನಮ್ಮ ದೇಶದ ಜನಸಂಖ್ಯೆ ನೂರು ಕೋಟಿಯನ್ನು ದಾಟಿದೆ. ದೇಶದ ಆರ್ಥಿಕ ಪ್ರಗತಿಯಿಂದಾಗಿ ತಲಾವಾರು ಆದಾಯ ಹೆಚ್ಚಾಗಿದೆ ಎಂಬುದೇನೋ ನಿಜ. ಹೀಗೆ ಹೆಚ್ಚಾದ ವರಮಾನವನ್ನು ಹಳ್ಳಿಯ ಜನ ಯಾವುದಕ್ಕಾಗಿ ಬಳಸುತ್ತಿದ್ದಾರೆ? ಒಂದು ಸಮೀಕ್ಷೆ ನಡೆಸಲಾಯಿತು. ಆದಾಯ ಹೆಚ್ಚಾದಂತೆ ಗ್ರಾಮೀಣ ಹೆಣ್ಣುಮಕ್ಕಳು ಹೆಚ್ಚು ಹೆಚ್ಚು ಫೇರ್ ಅಂಡ್ ಲವ್ಲಿ ಮತ್ತು ಆ ಬಗೆಯ ಕ್ರೀಮ್‌ಗಳಿಗಾಗಿ ಧಾರಾಳವಾಗಿ ಹಣ ವ್ಯಯ ಮಾಡುವುದು ತಿಳಿಯಿತು. ಜೊತೆಗೆ ಜಂಕ್‌ಫುಡ್ ಎಂದು ಕರೆಯಲಾಗುವ ಪ್ಯಾಕ್ ಮಾಡಿದ ಕುರುಕಲು ತಿಂಡಿಗಳು, ವಿಧವಿಧವಾದ ಕೋಕಾಕೋಲಾ ತರಹದ ಜ್ಯೂಸ್ ಬಾಟಲಿಗಳನ್ನು ಯಥೇಚ್ಛವಾಗಿ ಖರೀದಿಸುತ್ತಾರೆ. ಗಂಡು ಹುಡುಗರು ತಂಬಾಕು, ಸಿಗರೇಟ್ ಮತ್ತು ಮೊಬೈಲ್‌ಗಳಿಗಾಗಿ ಧಾರಾಳವಾಗಿ ಹಣ ಖರ್ಚುಮಾಡುವುದು, ಅದರಲ್ಲೂ ಮೊಬೈಲ್ ರೀಚಾರ್ಜ್‌ಗೆಂದು ಧಾರಾಳವಾಗಿ ಹಣ ಖರ್ಚುಮಾಡುವುದು ಸಮೀಕ್ಷೆಯಿಂದ ಕಂಡುಬರುತ್ತದೆ. ಬೆಳ್ಳಗೆ ಕಾಣುವ ಎಂದರೆ ಆಧುನಿಕರಾಗಿ ಕಾಣುವ ಹಂಬಲ ನಮ್ಮ ಮುಗ್ಧ ಗ್ರಾಮೀಣ ಜನರನ್ನು ಎಷ್ಟು ಆವರಿಸಿಕೊಂಡಿದೆ ಎಂದರೆ ಈ ಹಂಬಲದಲ್ಲಿ ತಮ್ಮ ಮಕ್ಕಳಿಗೆ ಪೌಷ್ಟಿಕ ಆಹಾರ ಕೊಡುತ್ತಿದ್ದೇವೆಯೇ ಎಂಬ ಪ್ರಶ್ನೆ ಅವರನ್ನು ಕಾಡುವುದಿಲ್ಲ, ಅಥವಾ ತಾವೇ ಆರೋಗ್ಯಕರ ಆಹಾರ ಸೇವಿಸುತ್ತಿದ್ದೇವೆಯೆ ಎಂಬ ಕುರಿತಾಗಿ ಅರಿವಿಲ್ಲ. ಆಧುನಿಕರಾಗುವುದು ಎಂದರೆ ಹೊಸ ಕಾಲಮಾನದ ಉಡುಗೆ ತೊಡುಗೆಗಳನ್ನು ತೊಡುವುದು, ಆಧುನಿಕ ಕಂಪನಿಗಳು ತಯಾರಿಸಿದ ಆಹಾರವನ್ನು ಸೇವಿಸುವುದು, ಶ್ರಮವಹಿಸಿ ಕೆಲಸಮಾಡದೆ ಫಲವನ್ನು ಪಡೆಯುವ, ಮತ್ತೊಬ್ಬರ ಶ್ರಮದ ಫಲವನ್ನು ಕದಿಯುವ ಹೊಸ ವಿಧಾನ



ಗಳನ್ನು ಅನುಸರಿಸುವುದು ಎಂದು ಭಾವಿಸುತ್ತಾರೆ. ಹೀಗೆ ಮಾರುಕಟ್ಟೆ ಜಾಹೀರಾತುಗಳು ಕಟ್ಟಿಕೊಟ್ಟ ಜೀವನದ ಚಿತ್ರಕ್ಕೆ ಮಾರುಹೋಗಿ ಅದರಂತೆ ಬದುಕು ರೂಢಿಸಿಕೊಳ್ಳುವುದೇ ನಮ್ಮ ಜನಗಳ ಜೀವನದ ಗುರಿಯಾಗಿ ಪರಿಣಮಿಸಿದೆ. ಇಷ್ಟಾದರೂ ಮನೆಗೊಂದು ಶೌಚಾಲಯ ಬೇಕೆಂದು ಇವರಿಗೆ ಅನ್ನಿಸುವುದೇ ಇಲ್ಲ. ಈ ಬಗೆಯ ಜೀವನದಿಂದ ನಮಗೆ ನಿಜವಾಗಿಯೂ ಸಂತೋಷ-ನೆಮ್ಮದಿಗಳು ಲಭಿಸುತ್ತಿವೆಯೇ ಎಂದು ಪ್ರಶ್ನಿಸುವ ವ್ಯವಧಾನವೂ ಇಲ್ಲವಾಗಿದೆ.



ತಂತ್ರಜ್ಞಾನ - ವಿಜ್ಞಾನಗಳ ಪ್ರಗತಿಯನ್ನು ಆಧರಿಸಿದ ಇಂತಹ ಆಧುನಿಕ ಜೀವನ ಕ್ರಮದ ಪರಿಣಾಮಗಳನ್ನು ಸ್ವಾಮಿ ವಿವೇಕಾನಂದರು ಮೊದಲೇ ಊಹಿಸಿ ಎಚ್ಚರಿಸಿದರು. ''ಮನುಷ್ಯ ಇಂದು ಪಡೆಯುತ್ತಿರುವ ಸಂತೋಷ, ನೂರು ವರ್ಷದ ಹಿಂದೆ ಅವನು ಪಡೆಯುತ್ತಿದ್ದ ಸಂತೋಷಕ್ಕಿಂತ ಹೆಚ್ಚಾಗಿದೆಯೆ?'' ಎಂದು ಅವರು ಪ್ರಶ್ನಿಸುತ್ತಾರೆ. ಮತ್ತೆ ಹೇಳುತ್ತಾರೆ, ''..ನೀವು ಕಂಡುಹಿಡಿಯುವ ಪ್ರತಿಯೊಂದು ಯಂತ್ರವೂ ಇಪ್ಪತ್ತು ಜನರನ್ನು ಶ್ರೀಮಂತರನ್ನಾಗಿ ಮಾಡಿದರೆ ಇಪ್ಪತ್ತು ಸಾವಿರ ಜನರನ್ನು ಬಡವರನ್ನಾಗಿ ಮಾಡುತ್ತದೆ.'' ಭೋಗಸಾಮಗ್ರಿಗಳ ಮೇಲಿನ ವ್ಯಾಮೋಹದಿಂದ ಅತಿಯಾದ ಆಸೆ, ಸ್ಪರ್ಧೆಗಳು ಹುಟ್ಟುವುದನ್ನು ಮತ್ತು ಅವುಗಳಿಂದ ಕೊನೆಗೆ ಸಂತೋಷಕ್ಕಿಂತ ಹೆಚ್ಚಾಗಿ ದುಃಖವುಂಟಾಗುವುದನ್ನು ಕುರಿತು ಸ್ವಾಮೀಜಿ ಸ್ಪಷ್ಟ ಮಾತುಗಳಲ್ಲಿ ಹೇಳಿದ್ದಾರೆ. ಈ ಆಧುನಿಕತೆಯ ವ್ಯಾಮೋಹದಿಂದಾಗಿ ಮನುಷ್ಯ ತನ್ನ ವೈಯುಕ್ತಿಕ ನೆಲೆಯಲ್ಲಿ ಸಂತೋಷ ಕಳೆದುಕೊಂಡರೂ ಅದನ್ನು ಗುರುತಿಸದಾಗಿದ್ದಾನೆ. ಐಷಾರಾಮಿ ಜೀವನದ ಆಸೆಯಿಂದಾಗಿ ದುರಾಸೆ - ಸ್ವಾರ್ಥಗಳು ಹೆಚ್ಚುತ್ತಿವೆ ಮತ್ತು ಇದರ ಪರಿಣಾಮವಾಗಿ ಸಂಪನ್ಮೂಲಗಳ ದುರ್ಬಳಕೆ ಮತ್ತು ಮಾಲಿನ್ಯದ ಸಮಸ್ಯೆ ಬೃಹದಾಕಾರವಾಗಿ ಬೆಳೆದು ಮನುಕುಲದ ಅಳಿವು-ಉಳಿವಿನ ಪ್ರಶ್ನೆಯಾಗಿ ನಿಂತಿದೆ.

ಮನುಷ್ಯನ ಎಲ್ಲಾ ಸಮಸ್ಯೆಗಳಿಗೂ ನಾವು ಕಾರಣವನ್ನು ಹೊರ ಜಗತ್ತಿನಲ್ಲಿ ಮಾತ್ರ ಹುಡುಕುತ್ತಿದ್ದೇವೆ. ಆರ್ಥಿಕ ಪ್ರಗತಿ ಹೆಚ್ಚಾದರೆ, ಉತ್ಪಾದನೆ ಹೆಚ್ಚಾದರೆ, ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಂಡರೆ ಸಮಸ್ಯೆಯನ್ನು ಪರಿಹರಿಸಬಹುದೆಂಬ ನಂಬಿಕೆಯಿಂದ ನಾವು ಶ್ರಮಿಸುತ್ತಿದ್ದೇವೆ. ಆದರೆ ಆಗಿರುವುದೇನು? ಪ್ರಗತಿ ಸಾಧಿಸಿರುವ ರಾಷ್ಟ್ರಗಳಲ್ಲಾಗಲಿ ಅಥವಾ ಪ್ರಗತಿಶೀಲ ರಾಷ್ಟ್ರಗಳಲ್ಲಾಗಲಿ ಒಂದಲ್ಲಾ ಒಂದು ಸಮಸ್ಯೆ ತಲೆ ಎತ್ತುತ್ತಲೇ ಇದೆ. ದಿನ ಕಳೆದಂತೆ ಮನುಷ್ಯಕುಲ ಅತೃಪ್ತಿ ಅಸಂತೋಷದಿಂದ ಬಳಲುವುದು ಹೆಚ್ಚಾಗುತ್ತಲೇ ಇದೆ. ಹೊರ ಜಗತ್ತಿನಲ್ಲಿ ತರುವ ಬದಲಾವಣೆಗಳಿಂದ ಮನುಷ್ಯ ಸಂತೋಷಿಯಾಗುತ್ತಾನೆ ಎಂಬ ನಂಬಿಕೆ ಸುಳ್ಳಾಗಿದೆ.

ನಮ್ಮ ಮನೆಗಳಲ್ಲಿ ಕಂಡುಬರುವ ಒಂದೊಂದು ಐಷಾರಾಮಿ ಸೌಲಭ್ಯಗಳೂ ನಮ್ಮ ಮನೋದೌರ್ಬಲ್ಯದ ಅಥವಾ ಮನಸ್ಸಿಗೆ ಅಂಟಿದ ಯಾವುದೋ ರೋಗದ ಬಾಹ್ಯಚಿನ್ಹೆ ಎಂದು ಗುರುತಿಸಬಹುದಾಗಿದೆ. ಹೀಗೆ ನಮ್ಮ ಪರಿಸರ ಮನುಷ್ಯನ ಮನೋರೋಗದ ಕುರುಹುಗಳಿಂದ ತುಂಬಿ ಹೋಗಿದೆ. ಇಡೀ ಸಮಾಜವೇ ರೋಗಗ್ರಸ್ತ ಮನುಷ್ಯರಿಂದ ತುಂಬಿ ಹೋಗಿದೆ. ಈ ಪರಿಸರದಲ್ಲಿ ಬೆಳೆಯುವ ಮಕ್ಕಳಿಗೂ ಸಹ ಈ ರೋಗದ ಸೋಂಕು ತಗಲುತ್ತದೆ; ಬಹು ಬೇಗ ಉಲ್ಬಣಿಸುತ್ತದೆ. ತಮ್ಮ ಮಕ್ಕಳಿಗೆ ಎಳೆಯ ವಯಸ್ಸಿನಲ್ಲೆಯೇ ಈ ರೋಗ ತಗುಲಿದ್ದನ್ನು ಕಂಡು ತಂದೆ ತಾಯಿಗಳು ಸಂಭ್ರಮಿಸುತ್ತಾರೆ. ನಮಗಿಂತ ನಮ್ಮ ಮಕ್ಕಳು ಹೆಚ್ಚು ಪ್ರಗತಿ ಸಾಧಿಸಿದ್ದಾರೆ ಎಂದು ಹೆಮ್ಮೆ ಪಡುತ್ತಾರೆ. ಮನಸ್ಸಿನ ಸಂತೋಷಕ್ಕಾಗಿ ನಾವು ವಸ್ತು ಸೌಕರ್ಯಗಳನ್ನು ಸಂಗ್ರಹಿಸಬೇಕು; ಆದರೆ ಈ ಸಂಗ್ರಹ ಕಾರ್ಯವೇ ಮನಸ್ಸಿನ ಅಳಿದುಳಿದ ಸಂತೋಷವನ್ನು ನಾಶ ಮಾಡಿದರೆ?

ಇಂತಹ ಒಂದು ಸಂದರ್ಭದಲ್ಲಿ ನಮ್ಮ ಅಸಂತೋಷದ ಕಾರಣ ಏನು ಎಂದು ಹುಡುಕಬೇಕಲ್ಲವೆ? ನಿಜವಾಗಿ ಹೇಳಬೇಕೆಂದರೆ ನಮ್ಮ ಒಳಗಿನ ಎಂದರೆ ಮನೋಮಯ ಪರಿಸರವನ್ನು ಆರೋಗ್ಯಕರವಾಗಿ ಬದಲಿಸಿಕೊಂಡರೆ ಅದಕ್ಕೆ ತತ್ಸಮಾನವಾದ ಆರೋಗ್ಯಕರ ಬದಲಾವಣೆಗಳು ಹೊರಜಗತ್ತಿನಲ್ಲಿಯೂ ಉಂಟಾಗುತ್ತದೆ. ಇದನ್ನೇ 'ಅಧ್ಯಾತ್ಮ' ಎನ್ನಬಹುದು.

ನೂರು ವರ್ಷಗಳ ಹಿಂದೆ ಸ್ವಾಮಿ ವಿವೇಕಾನಂದರು ಭಾರತೀಯ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳನ್ನು ಹೋಲಿಸುತ್ತ ಕೇವಲ ಯಂತ್ರ-ತಂತ್ರಗಳ ಸಹಾಯದಿಂದ ಸೌಕರ್ಯಗಳನ್ನು ಹೆಚ್ಚಿಸಿಕೊಂಡಾಕ್ಷಣ ಆ ದೇಶ ನಾಗರಿಕತೆಯನ್ನು ಸಾಧಿಸಿದೆ ಎಂದು ಹೇಳಬಹುದೆ ಎಂದು ಪ್ರಶ್ನಿಸುತ್ತಾರೆ. ಮತ್ತೆ ಹೇಳುತ್ತಾರೆ - ಇವು ಮನುಷ್ಯನ 'ಬೇಕು'ಗಳನ್ನು ಹೆಚ್ಚಿಸುತ್ತಲೇ ಹೋಗುತ್ತವೆ. ಮನುಷ್ಯ-ಮನುಷ್ಯರ ನಡುವೆ ಸ್ಪರ್ಧೆ, ಪೈಪೋಟಿಗಳನ್ನು ಹೆಚ್ಚಿಸಿ ಅವನು ವ್ಯಥಾ ಹೆಣಗುವಂತೆ ಮಾಡುತ್ತವೆ. ಆದರೆ ನಮ್ಮ ಸನಾತನ ಸಂಸ್ಕೃತಿ ಆಧ್ಯಾತ್ಮಿಕ

ಪ್ರಗತಿಯ ಮೂಲಕ ಈ 'ಬೇಕು' ಗಳ ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹರಿಸದಿದ್ದರೂ ಅದನ್ನು ಸಾಕಷ್ಟು ಕಡಿಮೆ ಮಾಡಿದೆ ಎನ್ನುತ್ತಾರೆ. ಎಂದರೆ ಇರುವುದರಲ್ಲೆ ತೃಪ್ತರಾಗಿರುವುದನ್ನು ಅಧ್ಯಾತ್ಮ ಕಲಿಸಿದೆ ಎನ್ನುತ್ತಾರೆ. ಆದರೆ ಇಂದು ಸ್ವಾಮಿ ವಿವೇಕಾನಂದರು ಬಂದು ನೋಡಿದರೆ ಏನು ಕಾಣುತ್ತದೆ? ಪಾಶ್ಚಾತ್ಯರಿಗಿಂತ ಒಂದು ಕೈ ಮಿಗಿಲಾಗಿ ನಮ್ಮ ಜನ 'ಬೇಕು'ಗಳ ಹಿಂದೆ ಬಿದ್ದಿದ್ದಾರೆ. ವೈಚಾರಿಕತೆಯನ್ನು, ವೈಜ್ಞಾನಿಕ ಮನಸ್ಸನ್ನು ಬೆಳೆಸಿಕೊಳ್ಳದೆ ದಟ್ಟದಾರಿದ್ರ್ಯದಿಂದ ತೊಳಲುತ್ತಿದ್ದರೂ, ತಮ್ಮ ಮೂಲಭೂತ ಆವಶ್ಯಕತೆಗಳಿಗೆ ಮೊದಲ ಆದ್ಯತೆ ನೀಡಬೇಕೆಂಬ ತಿಳುವಳಿಕೆಯೂ ಇಲ್ಲದೆ, ಐಷಾರಾಮಿ ಕನಸುಗಳ ಬೆನ್ನುಹತ್ತಿ ಹೋಗುತ್ತಿದ್ದಾರೆ. ಜನಸಾಮಾನ್ಯರ ದೌರ್ಬಲ್ಯಗಳನ್ನೇ ಬಂಡವಾಳ ಮಾಡಿಕೊಂಡು ಬೆಳೆಯುತ್ತಿರುವ ಜಾಗತೀಕರಣ – ಮಾರುಕಟ್ಟೆಗಳು ಜನರನ್ನು ಮತಿಹೀನರನ್ನಾಗಿ ಮಾಡಿವೆ. ವಾಸ್ತವವಾಗಿ ನಮ್ಮ ಈ ಐಷಾರಾಮಿ ಕನಸುಗಳನ್ನು ನನಸು ಮಾಡಲು ಸಾಧ್ಯವಿಲ್ಲ ಎಂಬುದು ನಮ್ಮ ಸರ್ಕಾರಗಳಿಗೆ ತಿಳಿದೇ ಇದೆ. ಇರುವ ಈ ಒಂದೇ ಭೂಮಿಯ ಸಂಪನ್ಮೂಲಗಳಿಂದ ಎಲ್ಲರಿಗೂ ಐಷಾರಾಮಿ ಬದುಕು ಕಟ್ಟಿಕೊಡಲು ಸಾಧ್ಯವಿಲ್ಲ ; ಇಂತಹ ದುಬಾರಿ ಕನಸು ನನಸಾಗಲು ಕನಿಷ್ಠ ಆರು ಭೂಮಿಗಳಾದರೂ ಬೇಕಾದೀತು ಎಂಬುದು ವೈಜ್ಞಾನಿಕ ಸತ್ಯ. ಆದರೂ ನಮ್ಮ ಸರ್ಕಾರಗಳು ಹುಸಿ ಆಶ್ವಾಸನೆ ನೀಡುತ್ತ ಓಟು ಗಿಟ್ಟಿಸುತ್ತ ಸತ್ಯವನ್ನು ಮರೆಮಾಚಿವೆ.

ಇಂತಹ ಒಂದು ಸಂದರ್ಭದಲ್ಲಿ ಆಧ್ಯಾತ್ಮಿಕ ಜೀವನ ದೃಷ್ಟಿಯೊಂದೇ ನಮ್ಮ ದೇಶವನ್ನು, ಆ ಮೂಲಕ ಇಡೀ ಪ್ರಪಂಚವನ್ನು ಕಾಪಾಡಬಲ್ಲದು. ಭಾರತ ತನ್ನ ಆಧ್ಯಾತ್ಮಿಕತೆಯನ್ನು ಕಳೆದುಕೊಂಡರೆ ಅದರಿಂದ ಇಡೀ ಪ್ರಪಂಚವೇ ನಾಶವಾದೀತು ಎಂಬ ಸ್ವಾಮಿ ವಿವೇಕಾನಂದರ ಮಾತುಗಳು ಈ ಸಂದರ್ಭದಲ್ಲಿ ಎಷ್ಟು ಪ್ರಸ್ತುತ ಎನಿಸುತ್ತದೆಯಲ್ಲವೆ? ಗಾಂಧೀಜಿಯವರ ನಡೆ–ನುಡಿಗಳನ್ನು ಗಮನಿಸಿದರೆ ಅವರು ಸ್ವಾಮಿ ವಿವೇಕಾನಂದರ ಮುಂದುವರಿಕೆಯಾಗಿರುವುದು ಸುಸ್ಪಷ್ಟ. ಆಧ್ಯಾತ್ಮಿಕ ಮೌಲ್ಯಗಳನ್ನು ಶ್ರಮದ ಜೊತೆ ಸೇರಿಸಿ ಕಟ್ಟುವ ಸರಳ ಜೀವನದ ಮಾದರಿಯೊಂದೇ ನಮ್ಮ ಮುಂದಿರುವ ಆಯ್ಕೆ. ಆದರೆ ಈ ಅಧ್ಯಾತ್ಮ ಪ್ರಧಾನವಾದ ಸರಳ ಜೀವನ ಜನಗಳಿಗೆ ಇಷ್ಟವಾಗುವ ಹಾಗೆ ಮಾಡಬಲ್ಲವರಾರು? ಇಂದು ನಮ್ಮ ಬಹುಪಾಲು ಮಠಮಾನ್ಯಗಳನ್ನೂ ಐಷಾರಾಮಿ ವ್ಯವಸ್ಥೆಯಿಂದ ಸಜ್ಜುಗೊಳಿಸಲಾಗಿದೆ. ಇವುಗಳೂ ಕೂಡ ಸಮಾಜ ಬಳಲುತ್ತಿರುವ ಸಮಸ್ಯೆಗಳ ಭಾಗವಾಗಿಯೇ ಮುಂದುವರಿಯುತ್ತಿರುವಂತೆ ಕಂಡುಬರುತ್ತಿವೆ. ಯಾವ ಮಹಾಪುರುಷನೂ ನಮ್ಮ ಈ ಸಮಸ್ಯೆಯನ್ನು ಪರಿಹರಿಸಲಾರ. ಹಾಗಾಗಿ ಸಮಾಜದ ಪ್ರತಿಯೊಬ್ಬನೂ ಈ ಸಮಸ್ಯೆಗೆ ಸ್ಪಂದಿಸಬೇಕು; ಪ್ರತಿಯೊಬ್ಬನೂ ದೃಢಸಂಕಲ್ಪ ಮಾಡಿ ಆಧ್ಯಾತ್ಮಿಕವಾದ ಸರಳ ಜೀವನದ ಕಡೆ ಹೆಜ್ಜೆ ಇಡಬೇಕು.



## ಶ್ರೀಮಾತೆಯವರ ಉಪದೇಶಗಳು

ಶಿಷ್ಯ: ಭಗವಂತನ ಪ್ರೀತಿಯನ್ನು ಪಡೆಯದೆ ಅವನಿಗೋಸ್ಕರ ವ್ಯಾಕುಲತೆ ಉಂಟಾಗುವುದಾದರೂ ಹೇಗೆ ?

ಶ್ರೀಮಾತೆ: ಅದೇ ನೋಡು, ಅವನ ಕೃಪೆಯಿಂದ ಅದು ಸಾಧ್ಯವಾದೀತು.

ಬಯಕೆಗಳು ಇರುವಷ್ಟು ಕಾಲವೂ ಜೀವಕ್ಕೆ ಜನನ ಮರಣ ತಪ್ಪಿದ್ದಲ್ಲ. ಬಯಕೆಗಳಿಂದಲೇ ದೇಹದಿಂದ ದೇಹಕ್ಕೆ ಜನ್ಮಾಂತರವುಂಟಾಗುವುದು. ಸ್ವಲ್ಪ ಸಂದೇಶ ಸಿಹಿತಿಂಡಿ ತಿನ್ನುವ ಆಸೆಯಿದ್ದರೂ ಪುನರ್ಜನ್ಮವುಂಟಾಗುವುದು.

ಬಯಕೆಗಳು ಸಣ್ಣ ಬೀಜದಂತೆ – ಆಲದ ಮರದ ಸಣ್ಣ ಬೀಜ ಮುಂದೊಂದು ದಿನ ಮಹಾವೃಕ್ಷವಾಗುವಂತೆ, ಅವೂ ಬೆಳೆದು ದೊಡ್ಡದಾಗುವುವು. ಬಯಕೆಗಳಿದ್ದರೆ ಖಂಡಿತ ಪುನರ್ಜನ್ಮವುಂಟಾಗುವುದು. ಒಂದು ಚೀಲದಿಂದ ದೇಹವನ್ನು ತೆಗೆದು ಇನ್ನೊಂದು ಚೀಲಕ್ಕೆ ತುಂಬಿದಂತೆ. ಎಲ್ಲೋ ಒಂದಿಬ್ಬರಿಗೆ ಮಾತ್ರ ಒಂದೇ ಬಾರಿಗೆ ಆಸೆಗಳು ಇಲ್ಲದಾಗುವುದು. ಆಸೆಗಳಿಂದಾಗಿ ಪುನರ್ಜನ್ಮವುಂಟಾದರೂ, ಪೂರ್ವ ಜನ್ಮದ ಸತ್ಕರ್ಮಗಳಿದ್ದರೆ ಅವನ ಆಧ್ಯಾತ್ಮಿಕ ಚೈತನ್ಯ ನಷ್ಟವಾಗುವುಲ್ಲ.

ಶಿಷ್ಯ : ಅಮ್ಮಾ, ಭಗವಂತನ ಕೃಪೆ ಯಾವಾಗ ಬೇಕಾದರೂ ಆದೀತು, ಆದ್ದರಿಂದ ತಕ್ಕ ಸಮಯಕ್ಕೆ ಕಾಯುವ ಅಗತ್ಯವಿಲ್ಲ.

ಶ್ರೀಮಾತೆ: ಅದೇನೋ ಸರಿ. ಆದರೆ ಜ್ಯೇಷ್ಠ ಮಾಸದಲ್ಲಿ ಆಗುವ ಮಾವಿನ ಹಣ್ಣಿನಷ್ಟು ಸಿಹಿ ಉಳಿದ ತಿಂಗಳಲ್ಲಿ ಆದ ಹಣ್ಣಿಗೆ ಇದ್ದೀತೆ? ಮನುಷ್ಯ ಅಕಾಲದಲ್ಲಿ ಫಲ ಗಳಿಸಲು ಪ್ರಯತ್ನ ಪಡುತ್ತಾನೆ. ಈಗ ನೋಡು, ಆಶ್ವಯುಜ ಮಾಸದಲ್ಲಿ ಹಲಸಿನಹಣ್ಣು, ಮಾವಿನ ಹಣ್ಣು ಆಗುತ್ತದೆ. ಆದರೆ ಆಯಾ ಋತುವಿನಲ್ಲಿ ಆದ ಹಣ್ಣಿನಂತೆ ಸಿಹಿ ಇದ್ದೀತೆ? ಭಗವಂತನ ಸಾಕ್ಷಾತ್ಕಾರದ ಹಾದಿಯೂ ಇದೇ ರೀತಿ. ಈ ಜನ್ಮದಲ್ಲಿ ಜಪ ತಪಾದಿಗಳನ್ನು ಮಾಡಿದರೆ ಮುಂದಿನ ಜನ್ಮದಲ್ಲಿ ಭಾವ ಇನ್ನಷ್ಟು ಘನೀಭೂತವಾಗುವುದು. ಅದಕ್ಕೂ ಮುಂದಿನ ಜನ್ಮದಲ್ಲಿ ಇನ್ನೂ ಸ್ವಲ್ಪ ಪ್ರಗತಿಯುಂಟಾಗುವುದು. ಇದು ಹೀಗೇ ತಾನೆ?

ಭಗವಂತನದು ಬಾಲಕ ಸ್ವಭಾವ. ಕೆಲವರು ಅದನ್ನು ಬಯಸುವುದಿಲ್ಲ, ಅವರಿಗೆ ಕೊಡುತ್ತಾನೆ. ಇನ್ನು ಕೆಲವರು ಬಯಸುತ್ತಾರೆ, ಅವರಿಗೆ ಕೊಡಲಾರ. ಇದೆಲ್ಲ ಅವನ ಆಟ.

ಶಿಷ್ಯ : ಬೆರಳಲ್ಲಿ ಮಂತ್ರಜಪ ಎಣಿಸುವುದೇಕೆ? ಸುಮ್ಮನೇ ಜಪ ಮಾಡಿದರೆ ಸಾಕಲ್ಲವೆ?

ಶ್ರೀಮಾತೆ: ಭಗವಂತ ಬೆರಳನ್ನು ಕೊಟ್ಟಿದ್ದಾನೆ. ಮಂತ್ರಜಪ ಮಾಡುವುದರಲ್ಲಿ ಅದರ ಸಾರ್ಥಕತೆ ಇದೆ.

ಶ್ರೀಶಾರದಾದೇವಿ ವಚನವೇದದಿಂದ